ಸಾಹಿತ್ಯ, ಕಲೆಯಲ್ಲಿ ತನ್ನ ವ್ಯಂಗ್ಯ, ಲೇವಡಿಗಳಲ್ಲಿ ಹೆಣ್ಣನ್ನು ಗುರಿಮಾಡಿರುವುದು ಕ್ರಿ.ಪೂ. 7ನೇ ಶತಮಾನದಿಂದಲೂ ಕಂಡುಬಂದಿದೆ. ಅರಿಸ್ಟೋಫೇನ್ಸ್‌ನನ್ನು ಒಳಗೊಂಡಂತೆ ಗ್ರೀಕ್ ನಾಟಕಗಳಲ್ಲಿ ಹೆಣ್ಣನ್ನು ವ್ಯಭಿಚಾರಿ, ಕಳ್ಳತನದಲ್ಲಿ ವೈನ್ ಕುಡಿಯುವವಳು, ಆಕೆ ಸೋಮಾರಿ ಮತ್ತು ಸಾಕಷ್ಟು ಸಮಯ ನೆರೆಹೊರೆಯ ಹೆಂಗಸರೊಂದಿಗೆ ಗೊಡ್ಡುಹರಟೆಯಲ್ಲಿ ತೊಡಗುವವಳು ಎಂಬುದಾಗಿ ಚಿತ್ರಿಸಲಾಗಿದೆ. ಮಡಕೆಗಳ ಮೇಲಿನ ಹೆಣ್ಣಿನ ಕುರಿತಾದ ವ್ಯಂಗ್ಯದ ಮತ್ತು ಲೇವಡಿಯ ಚಿತ್ರಗಳ ಕುರಿತಂತೆ ಸಾಕಷ್ಟು ಸಂಶೋಧನೆ, ಅಧ್ಯಯನ ನಡೆಸಿರುವ ಅಲೆಕ್ಸಾಂಡ್ರೆ ಮಿಶೆಲ್ ಈ ಕುರಿತಂತೆ ನಾಗರಿಕತೆ ಪ್ರಾರಂಭವಾದಾಗಿನಿಂದಲೂ ಹೆಣ್ಣಿನ ಬಗೆಗಿನ ಗಂಡಸಿಗೆ ಇರುವ ಆತಂಕದ ಕುರಿತಂತೆ ತಮ್ಮದೇ ಸಿದ್ಧಾಂತವನ್ನು ಮಂಡಿಸಿದ್ದಾರೆ. ಅವರ ಪ್ರಕಾರ ಗ್ರೀಕ್‌ನ ಮಡಕೆಗಳಲ್ಲಿಯೂ ಹೆಣ್ಣಿನ ಬಗೆಗಿನ ಚಿತ್ರಗಳಲ್ಲಿ ಆಕೆಯ ಮೇಲೆ ತಾನು ಆರೋಪಿಸಿರುವ ಇದೇ ನಾಲ್ಕು ವಿಷಯಗಳ ಕುರಿತಂತೆ ವ್ಯಂಗ್ಯಚಿತ್ರಗಳನ್ನು ರಚಿಸಲಾಗಿದೆ. ಮಿಶೆಲ್ ಹೇಳುವಂತೆ ಗಂಡಿಗೆ ಹೆಣ್ಣಿನ ಕಾಮ, ಆಕೆಯ ಸ್ವಚ್ಛಂದತೆ ಹೆದರಿಕೆಯ ವಿಷಯವಾಗಿತ್ತು. ಆ ಆತಂಕ ವ್ಯಂಗ್ಯಚಿತ್ರಗಳಲ್ಲಿ ಮೂಡಿಬಂದಿದೆ ಎನ್ನುತ್ತಾರೆ.



ರಾತ್ರಿ ಕುಡಿದು ಬಂದ ಗಂಡ ತನ್ನ ಕೋಲಿನಿಂದ ಮನೆಯ ಬಾಗಿಲು ಬಡಿಯುತ್ತಿದ್ದಾನೆ ಹಾಗೂ ಬಾಗಿಲ ಹಿಂದೆ ದೀಪ ಹಿಡಿದು ನಿಂತಿರುವ ಹೆಂಗಸು ತನ್ನ ಕೈ ಬಾಯಿ ಬಳಿ ತಂದು ಗಾಭರಿಯಿಂದ ನಿಂತಿದ್ದಾಳೆ (ಕ್ರಿ.ಪೂ. 440 – 420ರ ಚಿತ್ರ)

ಕ್ರಿ.ಪೂ. 500–490ರ ಅವಧಿಯ ಬಟ್ಟಲಿನ ಮೇಲಿನ ಚಿತ್ರವೊಂದರಲ್ಲಿ ಇಬ್ಬರು 'ಗೌರವಾನ್ವಿತ' ಮಹಿಳೆಯರು ಒಬ್ಬರಿಗೊಬ್ಬರು ಬೆನ್ನುಮಾಡಿ ತಮ್ಮ ದಿನನಿತ್ಯದ ಕೆಲಸದಲ್ಲಿ ತೊಡಗಿದ್ದಾರೆ, ಬಹುಶಃ ಹಿಟ್ಟು ನಾದುತ್ತಿರಬಹುದು. ಆ ಇಬ್ಬರು ಮಹಿಳೆಯರ ಮಧ್ಯೆ ಮೇಲುಗಡೆ ಶಿಶ್ನದಂತಹ ತಲೆ ಹೊಂದಿರುವ ಪಕ್ಷಿಯೊಂದಿದೆ. ಅದು ಅವರ ಮನಸ್ಸಿನಲ್ಲಿನ ಕಾಮದ ಭಾವನೆಗಳ ಸಂಕೇತವಾಗಿದೆ ಎನ್ನುತ್ತಾರೆ. ಕಾವಲುಗಾರನೇ ನಿದ್ರೆ ಮಾಡುತ್ತಿರುವ ಚಿತ್ರ ಒಂದು ಜನಪ್ರಿಯ ರೂಪಕವೂ ಹೌದು. ಹೆಣ್ಣನ್ನು ಸೋಮಾರಿ ಎಂದು ತೋರಿಸುವ ಚಿತ್ರವೊಂದರಲ್ಲಿ ಒಬ್ಬಾತ ಮಾಂಸ ಕತ್ತರಿಸಿ ನಾಯಿ–ಬೆಕ್ಕುಗಳಿಗೆ ಸಿಗದಂತೆ ಉದ್ದನೆ ಕೋಲಿನ ಮೇಲೆ ಇರಿಸಿದ್ದಾನೆ ಹಾಗೂ ಅದರ ಕಾವಲು ಕಾಯಲು ತನ್ನ ಪತ್ನಿಯನ್ನು ಕೂರಿಸಿದ್ದಾನೆ. ಆದರೆ ಆಕೆ ತನ್ನ ಕರ್ತವ್ಯ ಮರೆತು ನಿದ್ರೆ ಮಾಡುತ್ತಿದ್ದಾಳೆ. ಬೆಕ್ಕೊಂದು ಆ ಮಾಂಸ ಪಡೆಯಲು ಹೊಂಚು ಹಾಕುತ್ತಿದೆ.

ಗ್ರೀಕ್ ಸಮಾಜದಲ್ಲಿ ಬಹುಪಾಲು ಎಲ್ಲ ಸಂಸ್ಕೃತಿಗಳಲ್ಲಿರುವಂತೆ ಮನೆಗೆ ನೀರು ತರುವವಳು ಹೆಣ್ಣೇ ಆಗಿರುತ್ತಿದ್ದಳು. ಆ ಹೆಂಗಸರು ಗ್ರೀಸ್‌ನಲ್ಲಿಯೂ ಊರಿನಲ್ಲೋ ಅಥವಾ ಊರಿನ ಹೊರಗೋ ನೀರಿಗೆ ಹೋಗಬೇಕಾಗಿತ್ತು. ಸಾಮಾನ್ಯವಾಗಿ ಅಲ್ಲಿ ಹೆಂಗಸರು ಕಲೆತು 'ಗೊಡ್ಡುಹರಟೆ'ಯಲ್ಲಿ ತೊಡಗುತ್ತಾರೆ, ಅಷ್ಟೇಕೆ ಅವರು ಅಲ್ಲಿಗೆ ತಾವು ಹೋದ ಕೆಲಸವನ್ನೇ ಮೈಮರೆಯುತ್ತಾರೆ ಎನ್ನುವುದು ಆಗಿನ ಗಂಡಸರ ಅಭಿಪ್ರಾಯ ಸಹ ಆಗಿತ್ತು. ಅದನ್ನೇ ವ್ಯಂಗ್ಯಚಿತ್ರ ರೂಪದಲ್ಲಿ ಕ್ರಿ.ಪೂ. 500–480ರ ಅವಧಿಯ 'ಹೈಡ್ರಿಯ'ವೊಂದರ ಮೇಲೆ ಕಾಣಬಹುದು. ಅದರಲ್ಲಿ ಇಬ್ಬರು ಹೆಂಗಸರು ನೀರಿಗಾಗಿ ಬಂದಿದ್ದಾರೆ. ಸಿಂಹದ ಬಾಯಿಯ ನಳಿಕೆಯಿಂದ ನೀರು ಸುರಿಯುತ್ತಿದೆ. ಒಬ್ಬ ಹೆಂಗಸು ನೀರು ತುಂಬಿಕೊಂಡು, ತುಂಬಿದ ಹೈಡ್ರಿಯಾವನ್ನು ತನ್ನ ತಲೆಮೇಲಿರಿಸಿಕೊಂಡು ಹೊರಡಲು ಸಿದ್ಧವಾಗಿ ಮತ್ತೊಬ್ಬ ಹೆಂಗಸಿನೊಂದಿಗೆ ಮಾತನಾಡುತ್ತಿದ್ದಾಳೆ. ಈ ಹೆಂಗಸಿನ ಹೈಡ್ರಿಯಾ ತುಂಬಿ ನೀರು ಹೊರ ಹರಿಯುತ್ತಿದೆ. ಆದರೆ ಆಕೆಗೆ ಅದರ ಪರಿವೆಯೇ ಇಲ್ಲದಂತೆ ಮಾತಿನಲ್ಲಿ ತಲ್ಲೀನಳಾಗಿದ್ದಾಳೆ. ಮತ್ತೊಂದು ಕ್ರಿ.ಪೂ. 510–490ರ ಅವಧಿಯ 'ಹೈಡ್ರಿಯ'ವೊಂದರ ಮೇಲಿನ ಚಿತ್ರದಲ್ಲಿ ನೀರಿಗೆ ಬಂದಿರುವ ಹೆಂಗಸು ಸಿಂಹದ ಬಾಯಿಯ ನಳಿಕೆಯ ಕೆಳಗೆ ತನ್ನ ಹೈಡ್ರಿಯ ನೀರು ತುಂಬಿಸಿಕೊಳ್ಳಲು ಇರಿಸಿದ್ದಾಳೆ, ಆದರೆ ಅದನ್ನು ಸರಿಯಾಗಿ ಇರಿಸದೇ ಇರುವುದರಿಂದ ನೀರು ಅರ್ಧ ಹೊರಗೇ ಸುರಿಯುತ್ತಿದೆ. ಆಕೆಗೆ ಅದರ ಪರಿವೆಯಿಲ್ಲ, ಮತ್ತೊಂಡೆಗೆ ತಿರುಗಿ ಮಾತಿನಲ್ಲಿ ತಲ್ಲೀನಳಾಗಿದ್ದಾಳೆ. ಗ್ರೀಕ್ ಸಮಾಜದಲ್ಲಿ ಈ ರೀತಿಯ ನೀರು ತುಂಬಿಸಿಕೊಳ್ಳುವ ಸ್ಥಳಗಳೇ ಆಗಿನ ಹೆಂಗಸರಿಗೆ ಪರಸ್ಪರ ಭೇಟಿಯಾಗುವ, ಮಾತನಾಡುವ ಸ್ಥಳಗಳಾಗಿದ್ದವು. ಹಾಗಾಗಿ ಗಂಡಿಗೆ ಅಂತಹ ಭೇಟಿಗಳನ್ನು ಲೇವಡಿ ಮಾಡಬೇಕಾಗಿತ್ತು ಎನ್ನುತ್ತಾರೆ ಮಿಶೆಲ್.

ತಾವು ಪವಿತ್ರವೆಂದು ಭಾವಿಸುವ, ದೇವತೆಗಳನ್ನೂ ಸಹ ಲೇವಡಿ ಮಾಡುವ ಕಲಾಕಾರರ ಹಾಗೂ ಅವುಗಳನ್ನು ಸ್ವೀಕರಿಸುತ್ತಿದ್ದ ಮತ್ತು ಸಹಿಸುತ್ತಿದ್ದ ಸಮಾಜದ ಮನೋಭಾವ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇಲ್ಲಿ ಉಲ್ಲೇಖನೀಯ.

ಗ್ರೀಕ್ ಕುಂಬಾರಿಕೆ ಚಿತ್ರಕಲೆ ಅಚ್ಚರಿಯೆನ್ನುವಂತೆ ಕ್ರಿ.ಪೂ. 5ನೇ ಶತಮಾನದ ಮಧ್ಯಭಾಗದಿಂದಲೇ ಕಡಿಮೆಯಾಗತೊಡಗಿತು. ಗೋಡೆ ಮುಂತಾದವುಗಳ ಮೇಲೆ ದೊಡ್ಡ ಚಿತ್ರಕಲೆ ರಚಿಸುವ ಕಲಾವಿದರೊಂದಿಗೆ ಮಡಕೆ ಕುಡಿಕೆಗಳಂತಹ ಸಣ್ಣ ಮತ್ತು ಬಾಗಿದ ಮೇಲ್ಮೈನ ಮೇಲೆ ಚಿತ್ರ ರಚಿಸುವವರು ಸ್ಪರ್ಧಿಸುವುದು ಕಷ್ಟವಾಗಿರಲೂಬಹುದು. ಕ್ರಿ.ಪೂ. 430ರ ನಂತರ ಮಡಕೆಗಳ ಮೇಲಿನ ಚಿತ್ರಕಲೆಯ ಆಸಕ್ತಿ ಹಾಗೂ ಗೌರವವೂ ಕಡಿಮೆಯಾಗತೊಡಗಿ ಕ್ರಿ.ಪೂ. 320ರ ಹೊತ್ತಿಗೆ ಅಥೆನ್ಸ್‌ನಿಂದ ಸಂಪೂರ್ಣ ಕಣ್ಮರೆಯಾಯಿತು.

ಗ್ರೀಕ್ ನಾಗರಿಕತೆ ಉತ್ತುಂಗದಲ್ಲಿದ್ದಾಗ ಅಲ್ಲಿನ ಸಾಮಾನ್ಯ ಜನರ ಬದುಕು, ಸಂಸ್ಕೃತಿಯನ್ನು ಪರಿಚಯಿಸುವ ಚಿತ್ರಗಳ ಮೂಲಕ ಹಾಗೂ ಬದುಕಿನ ಮತ್ತೊಂದು ಮುಖವಾದ ವ್ಯಂಗ್ಯ, ಲೇವಡಿಯನ್ನು ಮನೋಲ್ಲಾಸದಿಂದ ಪರಿಚಯಿಸುವ ಗ್ರೀಕ್‌ನ ಮಡಕೆ ಕುಡಿಕೆಗಳು ಇಂದು ಜಗತ್ತಿನಾದ್ಯಂತ ವಸ್ತುಸಂಗ್ರಹಾಲಯಗಳಲ್ಲಿವೆ. ಈ ರೀತಿಯ ಅಧ್ಯಯನಕ್ಕೊಳಪಡದ ಸಾವಿರಾರು ಕುಂಬಾರಿಕೆ ವಸ್ತುಗಳು ಉಗ್ರಾಣಗಳಲ್ಲಿವೆ. ವಿದ್ವಾಂಸರಿಗೆ ಇಂದಿಗೂ ಈ ರೀತಿಯ ವಸ್ತುಗಳು ತಮ್ಮ ಉತ್ಖನನದಲ್ಲಿ ದೊರಕುತ್ತಲೇ ಇವೆ.



ಕುಂಬಾರನ ಚಕ್ರದ ಮೇಲೆ ಆಕ್ರೋಬ್ಯಾಟ್ ಬಾಲೆ
(ಚಿತ್ರ: ಜಿ.ಬಾಲಕೃಷ್ಣ)